# ಆರಿಗೆ ವಧುವಾದೆ ಅಂಬುಜಾಕ್ಷಿ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 55.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 46.
3. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 426.
4. **Note:** The wordings in the above references are matching. The singer has followed these lyrics.

ರಾಗ ಕಲ್ಯಾಣಿ ತಾಳ ಆದಿ

ಆರಿಗೆ ವಧುವಾದೆ ಅಂಬುಜಾಕ್ಷಿ
ಕ್ಷೀರಾಬ್ಧಿ ಕನ್ನಿಕೆ ಶ್ರೀ ಮಹಾ ಲಕುಮಿ || ಪ ||

ಶರಧಿ ಬಂಧನ ರಾಮಚಂದ್ರ ಮೂರುತಿಗೋ
ಪರಮಾತ್ಮ ಸಿರಿ ಅನಂತ ಪದ್ಮನಾಭನಿಗೋ
ಸರಸಿಜನಾಭ ಜನಾರ್ಧನ ಮೂರುತಿಗೋ
ಎರಡು ಹೊಳೆಯ ರಂಗಪಟ್ಟಣ ವಾಸಗೋ || 1 ||

ಚೆಲುವ ಬೇಲೂರ ಚೆನ್ನಿಗರಾಯನಿಗೋ
ಕೆಳದಿ ಹೇಳುಡುಪಿಯ ಕೃಷ್ಣರಾಯನಿಗೋ
ಇಳೆಯೊಳು ಪಂಢರಪುರ ವಿಠಲೇಶಗೋ
ನಳಿನಾಕ್ಷಿ ಹೇಳು ಬದರೀ ನಾರಾಯಣನಿಗೋ || 2 ||

ಮಲಯಜಗಂಧಿ ಬಿಂದುಮಾಧವ ರಾಯಗೋ
ಸುಲಭ ದೇವ ಪುರುಷೋತ್ತಮಗೋ
ಫಲದಾಯಕ ನಿತ್ಯ ಮಂಗಳ ನಾಯಕಗೋ
ಚೆಲುವೆ ನಾಚದೆ ಪೇಳು ಶ್ರೀ ವೆಂಕಟೇಶಗೋ || 3 ||

ವಾಸವಾರ್ಚಿತ ಕಂಚಿ ವರದ ರಾಜ ಮೂರುತಿಗೋ
ಆ ಸುರವಂದ್ಯ ಶ್ರೀಮುಷ್ಣ ದಾದಿ ವರಹನಿಗೋ
ಶೇಷ ಶಾಯಿಯಾದ ಶ್ರೀರಂಗ ನಾಯಕನಿಗೋ
ಸಾಸಿರ ನಾಮದೊಡೆಯ ಅಳಗಿರೀಶಗೋ || 4 ||

ಶರಣಾಗತರನು ಪೊರೆವ ಶಾರ್ಙ್ಗ ಪಾಣಿಗೋ
ವರಗಳೀವ ಶ್ರೀನಿವಾಸ ಮೂರುತಿಗೋ
ಕುರುಕುಲಾಂತಕ ರಾಜಗೋಪಾಲ ಮೂರುತಿಗೋ
ಸ್ಥಿರವಾದ ಪುರಂದರ ವಿಠಲ ರಾಯನಿಗೋ || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಕ್ಷೀರಾಬ್ದಿ ಕನ್ನಿಕೆ** = ಸಮುದ್ರ ಮಥನದ ಕಾಲದಲ್ಲಿ ಕ್ಷೀರ ಸಾಗರದಲ್ಲಿ ಹುಟ್ಟಿದ ಲಕ್ಷ್ಮೀ ದೇವಿ

**ಶರಧಿ ಬಂಧನ...** – ಸೇತು ಬಂಧದಲ್ಲಿರುವ (ರಾಮೇಶ್ವರ) ಶ್ರೀ ರಾಮ

**ಅನಂತ ಪದ್ಮನಾಭ...** – ಅನಂತ ಶಯನ.

**ಎರಡು ಹೊಳೆಯ...** – ಉಭಯ ಕಾವೇರಿಯ ಶ್ರೀರಂಗಪಟ್ಟಣ.

**ಕೆಳದಿ** – ಗೆಳತಿಯೆ.

**ಬಿಂದು ಮಾಧವ...** – ಕಾಶಿಯಲ್ಲಿರುವ ವಿಷ್ಣು ಸನ್ನಿಧಿ, ಪಂಚ ಗಂಗಾ ಘಾಟ್ ಮೇಲೆ ಬಿಂದು ಮಾಧವನ ಗುಡಿ ಇದೆ. ಬಿಂದು ತೀರ್ಥದ ಮೇಲ್ಗಡೆ ಇರುವುದರಿಂದ ಈ ಹೆಸರು ಬಂದಿದೆ ಎಂದು ಹೇಳುತ್ತಾರೆ.

**ಸುಲಭ ದೇವ** = ಭಕ್ತಿಗೆ ಒಲಿಯುವವ

**ಪುರುಷೋತ್ತಮ...** – ಪುರಿ ಜಗನ್ನಾಥ ಕ್ಷೇತ್ರ. ಪುರುಷೋತ್ತಮ ಪುರಿ / ನೀಲಾಚಲ ಕ್ಷೇತ್ರ ಎಂದೂ ಹೇಳುತ್ತಾರೆ.

**ವಾಸವ** = ಇಂದ್ರ

**ವಾಸವಾರ್ಚಿತ** = ಸ್ಥಳ ಪುರಾಣಗಳಲ್ಲಿ ಈ ಮೂರ್ತಿಯನ್ನು ಇಂದ್ರನು ಪೂಜಿಸಿದನೆಂದು ಉಲ್ಲೇಖವಿದೆ

**ಅಳಗಿರೀಶ...** – ವೆಂಕಟೇಶ್ವರ (ತಿರುಮಲೆ).

**ಶಾರ್ಙ್ಗಪಾಣಿ...** – ಕುಂಭಕೋಣದಲ್ಲಿ ವಿಷ್ಣುಮೂರ್ತಿ, ಶಾರ್ಙ್ಗ ಧನುಸ್ಸು ಹಿಡಿದುಕೊಂಡವ

**ರಾಜಗೋಪಾಲ...** – ಮನ್ನಾರು ಗುಡಿಯಲ್ಲಿ ಇರುವ ಮನ್ನರು ಕೃಷ್ಣ

**Classification:** Keerthane
**Ankita:** purandara vittala
**Location:** NA
**Category:** Lakshmi Stuti, Pooja Tatva.
**Sub-Category:** Vishnu, srinivasa, ranga, beluru, Krishna, rama, Samudra, Ananta, bhumi, Madhava, kanchi, badari, ksheera, mangala, shesha, Lakshmi, paramatma, sriranga patna, pandarapura, Narayana, deva, srimushna, srirangam,
**Pravachana:** NA
**Explanation:** NA